ದಿನಾಂಕ : DATE 11/4/2021
NAME OF THE NEWS PAPER: ವಿಶ್ವವಾಣಿ

## ಎಸ್ಐಟಿ ಮುಂದೆ ಉತ್ತರ ನೀಡಿದ ಸಿಡಿ ಯುವತಿ | ನಾಳೆ ರಮೇಶ್ ಜಾರಕಿಹೊಳಿ ವಿಚಾರಣೆ

# ಸಿಡಿ ದೂರಿನ ಹಿಂದೆ ಯಾರೂ ಇಲ್ಲ

**ವಿಶ್ವವಾಣಿ ಸುದ್ದಿಮನೆ** ಬೆಂಗಳೂರು

ಮಾಜಿ ಸಚಿವ ರಮೇಶ್ ಜಾರಕಿಹೊಳಿ ರಾಸಲೀಲೆ ಸಿಡಿ ಪ್ರಕರಣದ ಸಂತ್ರಸ್ತ ಯುವತಿಯ ವಿಚಾರಣೆಯನ್ನು ಎಸ್ ಐಟಿ ಅಧಿಕಾರಿಗಳು ಬಹುತೇಕ ಪೂರ್ಣಗೊಳಿಸಿದ್ದಾರೆ ಎಂದು ತಿಳಿದು ಬಂದಿದೆ.

ಸೋಮವಾರ ಸಿಡಿ ಲೇಡಿ ನ್ಯಾಯಾಧೀಶರ ಮುಂದೆ ಹಾಜರಾಗಿ ಹೇಳಿಕೆ ನೀಡಿದ ನಂತರ ಸತತವಾಗಿ ಐದು ದಿನಗಳ ಕಾಲ ಪೊಲೀಸರು ಆಕೆಯ ವಿಚಾರಣೆ ನಡೆಸಿ ಸ್ಥಳ ಮಹಜರು ಸಹ ಮಾಡಿದ್ದರು. ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರ ವಿರುದ್ಧ ಯುವತಿ ಸಾಕಷ್ಟು ಮಾಹಿತಿಯನ್ನು ಪೊಲೀಸರಿಗೆ ನೀಡಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬೆಳಗ್ಗೆ 10-30 ಕ್ಕೆ ಆರಂಭವಾದ ವಿಚಾರಣೆ ಸತತ ನಾಲ್ಕೂವರೆ ಗಂಟೆಗಳ ಕಾಲ ನಡೆಯಿತು. ವಿಚಾರಣೆ ನಂತರ ಯುವತಿಯನ್ನು ಬಿಗಿ ಭದ್ರತೆಯಲ್ಲಿ ಗೌಪ್ಯ ಸ್ಥಳಕ್ಕೆ ರವಾನಿಸಲಾಯಿತು. ಈ ಹಿಂದೆ ವಿಚಾರಣೆ ವೇಳೆ ಪೋಷಕರನ್ನು ಭೇಟಿ ಮಾಡುವ ಬಯಕೆ ವ್ಯಕ್ತಪಡಿಸಿದ್ದ ಯುವತಿ ಈಗ ತನ್ನ ನಿರ್ಧಾರ ಬದಲಿಸಿದ್ದಾರೆ ಎಂದು ಹೇಳಲಾಗುತ್ತಿದೆ. ಸಿಡಿ ಮಹಿಳೆಯ ವಿಚಾರಣೆಯನ್ನು ಪೂರ್ಣಗೊಳಿಸಿರುವ ಎಸ್ಐಟಿ ಪೊಲೀಸರು ಅಗತ್ಯ ಬಿದ್ದರೇ ಮತ್ತೆ ಕರೆಸುವುದಾಗಿ ಹೇಳಿದ್ದಾರೆ.



**ನಾಳೆ ರಮೇಶ್ ಜಾರಕಿಹೊಳಿ ವಿಚಾರಣೆ:** ಯುವತಿಯ ವಿಚಾರಣೆ ಮುಗಿದಿರುವ ಹಿನ್ನೆಲೆಯಲ್ಲಿ ಎಲ್ಲರ ಕಣ್ಣು ಎಸ್ಐಟಿ ಮುಂದಿನ ನಡೆಯತ್ತ ನೆಟ್ಟಿದೆ. ದೂರಿನ ನಂತರ ಮಹಿಳೆ ನೀಡಿರುವ ಹೇಳಿಕೆ ಮತ್ತು ವಿಚಾರಣೆಯಲ್ಲಿ ಹೊರಬಂದ ಸತ್ಯಗಳ ನಂತರ ರಮೇಶ್ ಜಾರಕಿಹೊಳಿ ಅವರನ್ನು ಪೊಲೀಸರು ಬಂಧಿಸುತ್ತಾರಾ ಎಂಬ ಪ್ರಶ್ನೆ ಎದಿದ್ದೆ. ಇನ್ನು ಸೋಮವಾರ ರಮೇಶ್ ಜಾರಕಿಹೊಳಿಯನ್ನು ವಿಚಾರಣೆಗೆ ಒಳಪಡಿಸಲು ಎಸ್ಐಟಿ ಅಧಿಕಾರಿಗಳು ಮುಂದಾಗಿದ್ದಾರೆ. ಜಾರಕಿಹೊಳಿ ವಿಚಾರಣೆ ಬಳಿಕ ಪ್ರಕರಣದ ವಾಸ್ತವಾಂಶಗಳು ಬಯಲಿಗೆ ಬರಲಿವೆ.

### ಯುವತಿಗೆ ಕೇಳಲಾಳದ ಪ್ರಶ್ನೆಗಳೇನು?

- **ಎಸ್ಐಟಿ:** ನೀವು ಕಿಡ್ನಾಪ್ ಆಗಿದ್ದು ನಿಜವೇ? ನಿಮ್ಮನ್ನು ಯಾರಾದರೂ ಕಿಡ್ನಾಪ್ ಮಾಡಲಾಗಿತ್ತಾ?

**ಸಂತ್ರಸ್ತೆ:** ಇಲ್ಲ, ನನ್ನನ್ನು ಯಾರು ಕಿಡ್ನಾಪ್ ಮಾಡಿಲ್ಲ, ನಾನಾಗಿಯೇ ಹೋಗಿದ್ದೆ

- **ಎಸ್ಐಟಿ:** ನಿಮ್ಮ ಪೋಷಕರು ನಿಮ್ಮನ್ನು ಕಿಡ್ನಾಪ್ ಮಾಡಿದ್ದಾರೆ ಎಂದು ದೂರು ನೀಡಿದ್ದಾರೆ?

**ಸಂತ್ರಸ್ತೆ:** ಅವರು ಯಾರದ್ದೋ ಒತ್ತಡದ ಮೇಲೆ ಹಾಗೆ ದೂರು ನೀಡಿದ್ದಾರೆ

- **ಎಸ್ಐಟಿ:** ನೀವು ಇಲ್ಲಿಂದ ಹೋದ ಮೇಲೆ ನಿಮ್ಮ ಕುಟುಂಬದ ಸದಸ್ಯರೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದಿರೇ?

**ಸಂತ್ರಸ್ತೆ:** ಹೌದು ನನ್ನ ಗೆಳೆಯ ಆಕಾಶ್ ಫೋನ್‌ನಿಂದ ಕೆಲವು ಸಲ ಕರೆ ಮಾಡಿದ್ದೆ, ಆಮೇಲೆ ಅವರ ಸಂಪರ್ಕವನ್ನು ನಾನು ಮಾಡಿಲ್ಲ. ಸಿಡಿ ಬಿಡುಗಡೆ ನಂತರ ಒಂದೆರಡು ದಿನ ಕರೆ ಮಾಡಿ ಮಾತಾಡಿದ್ದೆ, ನಂತರ ನಾನು ಕರೆ ಮಾಡಲಿಲ್ಲ, ಸ್ವಲ್ಪ ದಿನದ ಬಳಿಕ ಅವರ ಮೇಲೆ ಯಾರೊ ಒತ್ತಡ ಹಾಕಿ ದೂರು ಕೊಡಿಸಿದ್ದಾರೆ.

- **ಎಸ್ಐಟಿ:** ಕುಟುಂಬದವರಿಗೂ ಗಮನಕ್ಕೆ ತಾರದೆ ಇದ್ದಕ್ಕಿದ್ದಂತೆ ನೀವು ಹೊರಟು ಹೋಗಿದ್ದು ಏಕೆ?

**ಸಂತ್ರಸ್ತೆ:** ನನ್ನ ವಿಡಿಯೊ ಸೋಷಿಯಲ್ ಮೀಡಿಯಾದಲ್ಲಿ ಹರಿದಾಡಲಾರಂಭಿಸಿತ್ತು. ಹಾಗಾಗಿ ನನಗೆ ಭಯ ಆಯ್ತು. ಸಿಡಿ ಬಿಡುಗಡೆಯಿಂದ ಮನಸ್ಸಿಗೆ ತುಂಬಾನೇ ನೋವಾಯ್ತು ಹಾಗಾಗಿ ಯಾರ ಕಣ್ಣಿಗೂ ನಾನು ಬೀಳಲಿಲ್ಲ. ಇಲ್ಲಿ ಇರೋದು ಬೇಡ ಎಂದು ನಿರ್ಧರಿಸಿ ಸ್ನೇಹಿತ ಆಕಾಶ್ ಜತೆ ಗೋವಾ ಹೋಗಿದ್ದ. ಅಲ್ಲಿಂದ ಬೇರೆ ರಾಜ್ಯಗಳಿಗೂ ತೆರಳಿದ್ದೆ

- **ಎಸ್ಐಟಿ:** ಗೋವಾದಲ್ಲಿ ಹೋಗಿ ಎಲ್ಲಿ ಉಳಿದುಕೊಂಡಿದ್ರಿ?

**ಸಂತ್ರಸ್ತೆ:** ಗೋವಾದಲ್ಲಿ ನನ್ನ ಸ್ನೇಹಿತೆ ಮನೆ ಇದೆ, ಆಕೆಯ ಮನೆಯಲ್ಲೇ ಉಳಿದುಕೊಂಡಿದ್ದೆ

- **ಎಸ್ಐಟಿ:** ಮತ್ತೆ ಅಲ್ಲಿಂದ ನಿಮ್ಮ ಊರಿಗಾದರೂ ಬರಬಹುದಿತ್ತಲ್ವಾ?

**ಸಂತ್ರಸ್ತೆ:** ವಿಡಿಯೊ ವೈರಲ್ ಆದ ಬಳಿಕ ನಾನು ಊರಿಗೆ ಹೋಗುವ ಸ್ಥಿತಿಯಲ್ಲಿ ಇರಲಿಲ್ಲ

- **ಎಸ್ಐಟಿ:** ನೀವು ಯಾರದಾದ್ದರೂ ಬಂಧನದಲ್ಲಿ ಇದ್ರಾ? ನಿಮ್ಮ ತಂದೆ ತಾಯಿ, ಮಗಳು ಬಂಧನದಲ್ಲಿದ್ದಾಳೆ ಎಂದಿದ್ದಾರೆ

**ಸಂತ್ರಸ್ತೆ:** ಇಲ್ಲ ನನ್ನನ್ನು ಯಾರು ಬಂಧಿಸಿಟ್ಟಿರಲಿಲ್ಲ, ನಾನೇ ಕೆಲವರ ಸಹಾಯ ಕೇಳಿದ್ದೆ

- **ಎಸ್ಐಟಿ:** ವಿಡಿಯೊ ಮಾಡುವಂತೆ ನಿಮ್ಮ ಮೇಲೆ ಯಾರದಾದ್ರೂ ಒತ್ತಡವಿತ್ತಾ?

**ಸಂತ್ರಸ್ತೆ:** ಇಲ್ಲ, ನಾನೇ ವಿಡಿಯೊ ಮಾಡಿದ್ದು, ಯಾರದ್ದೇ ಒತ್ತಡ ನನ್ನ ಮೇಲಿರಲಿಲ್ಲ

- **ಎಸ್ಐಟಿ:** ಅಜ್ಞಾತ ಸ್ಥಳದಿಂದ ವಿಡಿಯೊ ಮಾಡಿದ್ದು ಯಾಕೆ? ನೀವೇ ನೇರವಾಗಿ ಬರಬಹುದಿತ್ತಲ್ವಾ?

**ಸಂತ್ರಸ್ತೆ:** ರಮೇಶ್ ಜಾರಕಿಹೊಳಿ ದೂರು ದಾಖಲು ಮಾಡಿದ್ರಲ್ವಾ, ಆದರಲ್ಲಿ ನನ್ನನ್ನೂ ಅಪರಾಧಿ ಎಂಬಂತೆ ಬಿಂಬಿಸುವ ಯತ್ನ ಮಾಡಲಾಗಿತ್ತು, ಹಾಗಾಗಿ ವಿಡಿಯೊ ಮೂಲಕ ಸ್ಪಷ್ಟನೆ ಕೊಡಬೇಕಾಯಿತು

- **ಎಸ್ಐಟಿ:** ನೀವು ಬೆಂಗಳೂರಿನಿಂದ ತೆರಳಿದಾಗ ನಿಮ್ಮ ಜತೆಯಿದ್ದವರು ಯಾರು?

**ಸಂತ್ರಸ್ತೆ:** ನನ್ನ ಸ್ನೇಹಿತ ಆಕಾಶ್ ಬಿಟ್ಟರೆ ಬೇರೆ ಯಾರೂ ನನ್ನ ಜತೆ ಯಾರು ಇರಲಿಲ್ಲ

- **ಎಸ್ಐಟಿ:** ಇಷ್ಟು ದಿನಗಳ ನಿಮ್ಮ ಖರ್ಚು-ವೆಚ್ಚವನ್ನೆಲ್ಲ ಯಾರು ನೋಡಿಕೊಂಡರು?

**ಸಂತ್ರಸ್ತೆ:** ನನ್ನಲ್ಲಿದ್ದ ದುಡ್ಡನ್ನೇ ತೆಗೆದುಕೊಂಡು ಹೋಗಿದ್ದೆ

- **ಎಸ್ಐಟಿ:** ಇಷ್ಟು ದಿನ ಯಾಕೆ ನೀವು ಎಲ್ಲಿಯೂ ಕಾಣಿಸಿಕೊಂಡಿಲ್ಲ?

**ಸಂತ್ರಸ್ತೆ:** ನನ್ನ ವಿಡಿಯೊ ವೈರಲ್ ಆಗಿತ್ತು. ರಮೇಶ್ ಜಾರಕಿಹೊಳಿ ಅವರಿಂದ ಭಯ ಕೂಡ ಇತ್ತು ಹಾಗಾಗಿ ನಾನು ಅಜ್ಞಾತ ಸ್ಥಳದಲ್ಲಿ ಇರುವ ಅನಿವಾರ್ಯತೆ ಎದುರಾಗಿತ್ತು.

- **ಎಸ್ಐಟಿ:** ವಿಡಿಯೊ ಮಾತ್ರ ರೆಕಾರ್ಡ್ ಮಾಡಿ ಬಿಡುಗಡೆ ಮಾಡುತ್ತಿದ್ರಿ, ರೆಕಾರ್ಡ್ ಮಾಡಿದ್ದು ಯಾರು?

**ಸಂತ್ರಸ್ತೆ:** ನನ್ನ ಸ್ನೇಹಿತರ ಮೂಲಕ ರೆಕಾರ್ಡ್ ಮಾಡಿಸುತ್ತಿದ್ದೆ. ಅವರು ಯಾರು ಅನ್ನೋದು ಬೇಡ. ಅವರಿಗೆ ತೊಂದರೆ ಆಗೋದು ಬೇಡ

- **ಎಸ್ಐಟಿ:** ಸರಿ ಈಗ ನೀವಿನ್ನು ಹೋಗಬಹುದು. ಅಗತ್ಯ ಬಿದ್ದರೆ ವಿಚಾರಣೆಗೆ ಕರೆಯುತ್ತೇವೆ, ನೀವು ಬರಬೇಕಾಗುತ್ತದೆ.

**ಸಂತ್ರಸ್ತೆ:** ಸರಿ, ಯಾವಾಗ ಕರೆದರು ವಿಚಾರಣೆಗೆ ಬರುತ್ತೇನೆ. ಆದರೆ ನನಗೆ ನ್ಯಾಯ ಕೊಡಿಸಿ ದಯವಿಟ್ಟು ಎಂದು ಮನವಿ ಮಾಡಿಕೊಂಡಿದ್ದಾರೆ ಎಂದು ಮೂಲಗಳು ತಿಳಿಸಿವೆ.